ರೂ ಕೋಟಿಗಳಲ್ಲಿ

ವರ್ಷ	ದಿನಾಂಕ	ಬಿಡುಗಡೆಯಾದ ಹಣ	ವಿನಿಯೋಗಿಸಿದ ಹಣ
2005–06	ಮಾರ್ಚ್ 2006	44 55	39 86
2006–07	26 6 2006	10 00	10 00
	10 01 2007	73 48	ಈ ಅನುದಾನವು ಇತ್ತೀಚೆಗೆ ವಿನಿಯೋಗಿಸಲಾಗುತ್ತಿದೆ

ಉ) ಹೌದು

ಅನುಷ್ಠಾನದ ವಿವರಗಳನ್ನು ಮೇಲಿನ (ಈ)ನಲ್ಲಿ ನೀಡಲಾದ ಉತ್ತರದಲ್ಲಿ ವಿವರಿಸಲಾಗಿದೆ

685 (717) ಶ್ರೀ ಕೃಷ್ಣ ಪಾಲೇಮಾರ್ ಜೆ (ಸುರತ್ಕಲ್) – ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಬಂಜರು ಭೂಮಿಯಲ್ಲಿ ಜೈವಿಕ ಇಂಧನ ಸಸ್ಯಗಳನ್ನು ಬೆಳೆಸುವ ಯೋಜನೆಯನ್ನು ಸರ್ಕಾರ ರೂಪಿಸಿದೆಯೇ, ಹಾಗಿದ್ದಲ್ಲಿ ವಿವರಗಳೇನು ,

ಆ) ಸದರಿ ಯೋಜನೆಗಾಗಿ ಎಷ್ಟು ಹಣವನ್ನು ಕಳೆದ ಎರಡು ವರ್ಷಗಳಲ್ಲಿ ವಿನಿಯೋಗಿಸಲಾಗಿದೆ , ಜತ್ರೋಪ, ಹೊಂಗೆ, ಮತ್ತಿತರ ಇಂಧನ ಸಸ್ಯಗಳನ್ನು ರೈತರಿಗೆ ವಿತರಿಸುವ ಕಾರ್ಯಕ್ರಮದ ವಿವರಗಳೇನು ,,

ಇ) ಹಾಸನ ಜಿಲ್ಲೆಯಲ್ಲಿ ಜೈವಿಕ ಇಂಧನ ಪಾರ್ಕ್ ಸ್ಥಾಪನೆಯ ಕುರಿತು ಸರ್ಕಾರದ ಪ್ರಸ್ತಾವನೆಯು ಯಾವ ಹಂತದಲ್ಲಿದೆ?

ಶ್ರೀ ಬಂಡೆಪ್ಪ ಕಾಶಂಪೂರ್ (ಕೃಷಿ ಸಚಿವರು)

ಅ) ಹೌದು ರಾಜ್ಯದ ಎರಡು ಕೃಷಿ ವಿಶ್ವವಿದ್ಯಾನಿಲಯ ಹಾಗೂ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಪರಿಷತ್ತಿನ ಸಹಯೋಗದೊಂದಿಗೆ ಜೈವಿಕ ಇಂಧನ ಸಸಿಗಳನ್ನು ಬೆಳೆಸಿ ಅದನ್ನು ರೈತರಿಗೆ ವಿತರಿಸಲಾಗುತ್ತಿದೆ

ಆ) ಕಳೆದ 2 ವರ್ಷಗಳಲ್ಲಿ ರೂ 325 00 ಲಕ್ಷಗಳನ್ನು ವಿನಿಯೋಗಿಸ ಲಾಗಿದೆ

1 ಜತ್ರೋಪ, ಹೊಂಗೆ, ಬೇವು ಮತ್ತು ಹಿಪ್ಪೆ ಸಸಿಗಳನ್ನು ಬೆಳೆಸಿ ರೈತರಿಗೆ ವ್ಯವಸಾಯಕ್ಕೆ ಯೋಗ್ಯವಲ್ಲದ / ಬಂಜರು ಭೂಮಿ ಹಾಗೂ ಬದುಗಳ ಮೇಲೆ ಬೆಳೆಸಲು ಉಚಿತವಾಗಿ ವಿತರಿಸುವುದು

2 ಹೊಂಗೆ, ಬೇವು, ಹಿಪ್ಪೆ ಮತ್ತು ಸಿಮರೋಬ ಸಸಿಗಳನ್ನು ಕಸಿ ಕಟ್ಟುವುದು ಹಾಗೂ ಕಸಿಕಟ್ಟಿದ ಸಸಿಗಳನ್ನು ರೈತರಿಗೆ / ಇಲಾಖಾ ಕೃಷಿ ಕ್ಷೇತ್ರಗಳಿಗೆ ಉಚಿತವಾಗಿ ವಿತರಿಸುವುದು

ಇ) ಹಾಸನ ಜಿಲ್ಲೆ ಕೃಷಿ ಕಾಲೇಜಿನ ಮೂಲಕ ಹಾಸನ ಜಿಲ್ಲೆಯಲ್ಲಿ ಜೈವಿಕ ಇಂಧನ ಪಾರ್ಕ್ ಒಂದನ್ನು ಸ್ಥಾಪಿಸಲು ಸರ್ಕಾರವು 20 1 2007 ರಂದು ಮಂಜೂರಾತಿ ನೀಡಿದೆ

686 (718) ಶ್ರೀ ಕೃಷ್ಣ ಪಾಲೇಮಾರ್ ಜೆ (ಸುರತ್ಕಲ್) – ಮಾನ್ಯ ಮೀನುಗಾರಿಕೆ ಮತ್ತು ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮತ್ಸ್ಯಾಶ್ರಯ ಯೋಜನೆಯಡಿಯಲ್ಲಿ 2005–06 ಮತ್ತು 2006–07ನೇ ಸಾಲಿನಲ್ಲಿ ಎಷ್ಟು ಮನೆಗಳನ್ನು ನಿರ್ಮಿಸಿ ಫಲಾನುಭವಿಗಳಿಗೆ ವಿತರಿಸಲಾಗಿದೆ , (ಕರಾವಳಿ ಜಿಲ್ಲೆಯ ತಾಲ್ಲೂಕುವಾರು ವಿವರ ನೀಡುವುದು) ,

ಆ) ಮತ್ಸ್ಯ ಮಹಿಳಾ ಸ್ವಾವಲಂಬನೆ ಯೋಜನೆಗಾಗಿ ಸರ್ಕಾರ ಬಿಡುಗಡೆ ಮಾಡಿದ ಅನುದಾನದ ಮೊತ್ತ ಎಷ್ಟು, ಎಷ್ಟು ಜನ ಫಲಾನುಭವಿಗಳಿಗೆ ಯೋಜನೆಯ ಸೌಲಭ್ಯವನ್ನು ನೀಡಲಾಗಿದೆ ?

ಶ್ರೀ ಬಿ ನಾಗರಾಜಶೆಟ್ಟಿ (ಮೀನುಗಾರಿಕೆ ಮತ್ತು ಮುಜರಾಯಿ ಸಚಿವರು)

ಅ) ಮತ್ಸ್ಯಾಶ್ರಯ 1 ಮತ್ತು 2ನೇ ಹಂತದ ಯೋಜನೆಯಡಿಯಲ್ಲಿ ಕರಾವಳಿ ಜಿಲ್ಲೆಗಳಲ್ಲಿ 2005–06 ರಿಂದ ಒಟ್ಟು 462 ಮನೆಗಳನ್ನು ನಿರ್ಮಿಸಿ ಫಲಾನುಭವಿಗಳಿಗೆ ನೀಡಲಾಗಿದೆ ತಾಲ್ಲೂಕುವಾರು ವಿವರ ಕೆಳಕಂಡಂತಿದೆ

ಕ್ರಮ ಸಂಖ್ಯೆ	ತಾಲ್ಲೂಕು	2005–06
1	ಮಂಗಳೂರು	36
2	ಉಡುಪಿ	163
3	ಕುಂದಾಪುರ	100

28/4